| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 4. | ಅಕ್ಕಿ, ಮೆಣಸಿನ ಕಾಳು ಮತ್ತು ನೇಕಾರರು ನೇಯ್ದ ಬಟ್ಟೆಗಳ ವ್ಯಾಪಾರಕ್ಕಾಗಿ ಪೋರ್ಚುಗೀಸರು ಭಾರತಕ್ಕೆ ಬಂದರು. | |
| 5. | ಸಂನ್ಯಾಸಿ ವೇಷಧರಿಸಿದ ಸರದಾರನ ಹೆಸರು ಶಾಂತಯ್ಯ. | |
| 6. | ಶಿವಾಜಿಯನ್ನು ಸೋಲಿಸುತ್ತೇನೆಂದು ನನ್ನ ಕೈ ಮೇಲೆ ಕೈ ಇಟ್ಟು ಪ್ರಮಾಣ ಮಾಡಿ ಎಂದು ಈಶಪ್ರಭುವು ಹೆಂಡತಿಯಿಂದ ಪ್ರಮಾಣ ಮಾಡಿಸಿಕೊಂಡನು. | |
| 7. | ನಾ. ಕಸ್ತೂರಿಯವರದು ಲಲಿತ ಪ್ರಬಂಧಗಳ ಮತ್ತು ಸ್ವಚ್ಛಂದ ಹರಟೆಗಳ ಕ್ಷೇತ್ರಗಳಲ್ಲಿ ಮರೆಯಲಾರದ ಹೆಸರು. | |
| 8. | ಹಿಂದೂ, ಕ್ರೈಸ್ತ, ಮುಸಲ್ಮಾನರಾದ ನಾವು, ನೀವು, ಅವರು, ಇವರು ಎಲ್ಲರೂ ಒಂದೇ ಎಂದು ಕೆ.ಎಸ್. ನಿಸಾರ್ ಅಹಮದ್‌ರವರು ಹೇಳಿದ್ದಾರೆ. | |
| 9. | ದಾಸ್ಯ ಸಂಕೋಲೆ ಕಳಚಿ ಬಿದ್ದರೆ ನಾವು ಹೊಸ ಮನುಷ್ಯರಾಗುತ್ತೇವೆ ಎಂದು ಬಿ.ಆರ್. ಲಕ್ಷ್ಮಣರಾವ್‌ರವರು ಹೇಳಿದ್ದಾರೆ. | |
| 10. | ಬಡತನಕ್ಕೆ ಉಣ್ಣುವ ಚಿಂತೆ ಕಾಡುವುದು ಎಂದು ಅಂಬಿಗರ ಚೌಡಯ್ಯನು ಹೇಳಿದ್ದಾನೆ. | |
| 11. | ಪುರಂದರದಾಸರು ಹೇಳಿರುವಂತೆ ಪರಮಾತ್ಮನನ್ನು ಕಾಣಬೇಕಾದರೆ ಮನಸ್ಸನ್ನು ದಂಡಿಸಬೇಕು. | |
| 12. | ರೈತನಿಗೆ ಮೋಡಗಳು ಗೋಡೆಗೆ ಕಪ್ಪು ಬಣ್ಣ ಬಳಿದ ಹಾಗೆ ಕಾಣುತ್ತಿದ್ದವು. | |
| 13. | ಪುಲಿಗೆರೆ ಕವಿ ಸೋಮನು ಯಾರು ಏನೆಂದರೂ ಕೋಪಿಸಿಕೊಳ್ಳದೆ ತಾಳ್ಮೆಯಿಂದ ಇರುವವನೇ ದೊರೆಯಾಗಬೇಕೆಂದು ಹೇಳಿದ್ದಾನೆ. | |
| 14. | ಪುಲಿಗೆರೆ ಕವಿ ಸೋಮನ ಪ್ರಕಾರ ಮಗನಿಗೆ ಇರಬೇಕಾದ ಅರ್ಹತೆ ವಿನಯವಿರಬೇಕು. | |
| 15. | ಧರ್ಮಪದನ ತಂದೆಯ ಹೆಸರು ವಿಶು. | |
| 16. | ಧರ್ಮಪದನು ಕೋನಾರ್ಕ ದೇವಾಲಯದ ಮಹಾದ್ವಾರಕ್ಕೆ ಕಲಶ ಕೂಡಿಸಲು ಬಂದನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 42. | (ಡಿ) ಉಪಮಾ | |
| 43. | (ಬಿ) ಪ್ರಶ್ನಾರ್ಥಕ | |
| 44. | (ಸಿ) ಜೋಡುನುಡಿ | |
| 45. | (ಡಿ) ಸ್ವದೇಶ | |
| 46. | (ಎ) ಕ್ರಿಯಾ | |
| 47. | (ಬಿ) ಸವರ್ಣದೀರ್ಘ ಸಂಧಿ | |
| 48. | (ಸಿ) ಆಶ್ಚರ್ಯ | |
| 49. | (ಡಿ) ಸಂಯೋಜಿತ ವಾಕ್ಯ | |
| 50. | (ಸಿ) ರಾಮಸಿಂಗನು | |
| 51. | (ಬಿ) ಸರ್ವನಾಮ | |
| | **ವಿಭಾಗ – 'ಸಿ'** **(ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)** | |
| | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :** | |
| | (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) | 4 × 1 = 4 |
| 52. | ಪೂರ್ಣಿಮಾ ಮುದ್ದಿನಿಂದ ಸೊಂಪಾಗಿ ಬೆಳೆದು ಹುಣ್ಣಿಮೆ ಚಂದ್ರನ ಹಾಗೆ ಮೈಕೈ ತುಂಬಿಕೊಂಡಿದ್ದಳು. | |
| 53. | ಬಡತನದಿಂದ ವರದಕ್ಷಿಣೆ ಕೊಡಲಾರದೆ ಅವಳ ತಾಯಿ–ತಂದೆ ಅವಳನ್ನು ಇಪ್ಪತ್ತು ಜನರಿದ್ದ ದೊಡ್ಡ ಕುಟುಂಬಕ್ಕೆ ಸೊಸೆಯನ್ನಾಗಿ ಮಾಡಿದರು. | |
| 54. | ಪ್ರತಿದಿನ ಪೂರ್ಣಿಮಾಳ ಪಾಲಿನ ಕೆಲಸವೆಂದರೆ ಹೊತ್ತಿಗೆ ಅರವತ್ತರಿಂದ ಎಂಬತ್ತು ರೊಟ್ಟಿ ಬಡಿಯುವುದು. | |
| 55. | ಮುಂಜಾನೆಯಿಂದ ಸಂಜೆಯವರೆಗೂ ರೊಟ್ಟಿ ಬಡಿದು, ಬಡಿದು, ರಾತ್ರಿ ಮಲಗಿದಾಗಲೂ ಅವಳ ಕೈಗಳು ರೊಟ್ಟಿ ಬಡಿಯುವ ಕೆಲಸವನ್ನು ಮುಂದುವರಿಸುತ್ತಿದ್ದವು. ಇದರಿಂದ ಪೂರ್ಣಿಮಾಳ ಗಂಡನ ಬೆನ್ನು ನೀಲಿಗಟ್ಟಿತ್ತು. | |

